ಒ ಎಸ್ 141/2018 ಡಿ.ಡಬ್ಲ್ಯೂ:1

ಇಂದು ದಿಃ 28.01.2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ

ದಾವಾ ಆಸ್ತಿ ನನ್ನ ಮೊದಲ ಹೆಂಡತಿ ಆಸ್ತಿಯಾಗಿದ್ದು ಅದನ್ನು ಬಿಟ್ಟು ಬೇರೆ ಆಸ್ತಿಗಳು ನನಗೆ ಇಲ್ಲ. ನನಗೆ ಬೇರೆ ಆಸ್ತಿ ಇಲ್ಲದ ಕಾರಣ ನಾನು ಯಾವುದೇ ವ್ಯವಸಾಯ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳಿಗೂ ಮತ್ತು ನನ್ನ ಸಾಕ್ಷ್ಯಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಈಗಾಗಲೇ ಹಾಜರುಪಡಿಸಿರುವ ದಾಖಲೆಗಳನ್ನು ಹೊರತುಪಡಿಸಿ ಬೇರೆ ದಾಖಲಾತಿಗಳು ನನ್ನ ಬಳಿ ಇಲ್ಲ. ನಾನು ಮೊದಲಿನಿಂದಲೂ ಸಹ ನನ್ನ ಮೊದಲ ಹೆಂಡತಿ ಆಸ್ತಿಯಾದ ದಾವಾ ಆಸ್ತಿಯನ್ನು ಒಬ್ಬರಿಂದ ಒಬ್ಬರಿಗೆ ಭೋಗ್ಯ ಮಾಡಿ ಹಣ ದುರುಪಯೋಗಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗಳ ಮದುವೆಯನ್ನು ನನ್ನ ತಮ್ಮ ಮಹೇಶ ಮತ್ತು ಅವರ ಗಂಡನ ಮನೆಯವರು ಮಾಡಿಸಿದ್ದರು ಎಂದರೆ ಸರಿಯಲ್ಲ. ಈಗಲೂ ಸಹ ನಾನು ತಂದೆಯಾಗಿ ವಾದಿಯ ಕರ್ತವ್ಯವನ್ನು ಮಾಡುತ್ತಿಲ್ಲ ಎಂದರೆ ಸುಳ್ಳು. ನಾನು 2ನೇ ಮದುವೆಯಾದ ಕಾರಣ ಮೊದಲ ಹೆಂಡತಿಯ ದಾವಾ ಆಸ್ತಿಯಲ್ಲಿ ನನಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನ್ನ ಮೊದಲ ಹೆಂಡತಿ ಮತ್ತು ಮಕ್ಕಳಿಗೆ ಮಾತ್ರ ಹಕ್ಕು ಇದೆ, ನನಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಆನ್ ಡಿಮಾಂಡ ಪ್ರಾಮಿಸರಿ ನೋಟ್ ಗಳು ವಾದಿಗೆ ಬದ್ದಪಡಿಸುವುದಿಲ್ಲ ಮತ್ತು ಅವು ಸುಳ್ಳು ಪ್ರಮಾಣ ಪತ್ರಗಳು ಎಂದರೆ ಸರಿಯಲ್ಲ. ನನ್ನ ಮೊದಲ ಹೆಂಡತಿಗೆ ಯಾವುದೇ ರೋಗ ರುಜನೆ ಇರಲಿಲ್ಲ ಆದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮೊದಲ ಹೆಂಡತಿ ತಿಥಿ ಕಾರ್ಯವನ್ನು ಮಹೇಶ ಮತ್ತು ಅವರ ಬಾಮೈಕಳು ಮಾಡಿದ್ದರು ಎಂದರೆ ಸುಳ್ಳು. ನನ್ನ ಮಕ್ಕಳಿಗೆ ತಿಳಿಯದ ರೀತಿಯಲ್ಲಿ ದಾವಾ ಆಸ್ತಿ ಖಾತೆಯನ್ನು ಜಂಟಿಯಾಗಿ ಕೂರಿಸಿಕೊಂಡಿದ್ದೇನೆ ಎಂದರೆ ಸುಳ್ಳು. ಅದು ವಾದಿಯ ಆಸ್ತಿಯ ಹಕ್ಕಿಗೆ ಬದ್ದಪಡಿಸುವುದಿಲ್ಲ ಎಂದರೆ ಸುಳ್ಳು. ನಾನು ನನ್ನ ಮಕ್ಕಳಿಗೆ ಮೋಸ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.